ನಮಗೆ ದೂರು ಬಂತು. ಇಂಟರ್‌ವ್ಯೂ ಮಾಡುವಾಗ ಕೆಲವು ಜನರಿಗೆ ಅತಿ ಹೆಚ್ಚಿನ ಮಾರ್ಕ್ಸ್ ಕೊಡುವುದು, ಇನ್ನು ಕೆಲವು ಜನರಿಗೆ ಅತಿ ಕಡಿಮೆ ಮಾರ್ಕ್ಸ್ ಕೊಡತಕ್ಕಂಥಾದ್ದು ಇದೆ, ನಿಜವಾಗಿಯೂ ಯೋಗ್ಯತೆ ಇರತಕ್ಕಂತಹವರಿಗೆ ಅವಕಾಶ ಸಿಗುತ್ತಿಲ್ಲವೆಂದು ದೂರು ಬಂತು. ಆದ್ದರಿಂದ ನೇಮಕಾತಿಯಲ್ಲಿ ರಿಸರ್ವೇಷನ್ ಪಾಲನೆ ಆಗಬೇಕು, ನಿಯಮಕ್ಕೆ ಒಳಪಟ್ಟು ಅವರು ಏನು ಮಾರ್ಕ್ಸ್ ಗಳಿಸಿರುತ್ತಾರೆ ಅದರ ಆಧಾರದ ಮೇಲೆ ಸೆಲೆಕ್ಟ್ ಮಾಡುತ್ತಿದ್ದೇವೆ. ಈ ಒಂದು ಹುದ್ದೆಗೆ ಬೇರೆ ಯಾವುದೇ ಅರ್ಹತೆ ಅಗತ್ಯವಿಲ್ಲ. ಸ್ಪೀಡ್ ಮತ್ತು ಅವರ ಭಾಷಾ ಜ್ಞಾನ, ಈ ಎರಡರಲ್ಲಿಯೂ ಕೂಡ ಅವರು ಯಾವ ಇನ್ಸ್‌ಟಿಟ್ಯೂಷನ್ಸ್‌ನಲ್ಲಿ ಓದುತ್ತಾರೆಯೋ ಓದಿ ಡಿಗ್ರಿ, ಡಿಪ್ಲೊಮಾ ಸರ್ಟಿಫಿಕೇಟ್ ಪಡೆದುಕೊಳ್ಳುತ್ತಾರೆಯೋ ಅಲ್ಲಿಯೇ ಈ ಎರಡೂ ಪರೀಕ್ಷೆಯಾಗಿರುತ್ತದೆ. ಎಂಪ್ಲಾಯಮೆಂಟ್ ಎಕ್ಸ್‌ಚೇಂಜ್‌ನಲ್ಲಿ ಪಟ್ಟಿಯನ್ನು ತರಿಸಿ ಅದರೊಳಗೆ ಈ ಡೈರೆಕ್ಟರ್‌ರವರು ಏನು ಇದ್ದಾರೆ ಅವರು ಆರಿಸುತ್ತಾರೆ. ಇದು ಅತ್ಯಂತ ಸುಲಭವಾದಂತಹ ಒಂದು ಪದ್ಧತಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮೆರಿಟ್ ಮೇಲೆ ಮಾಡುವಾಗ ರೋಸ್ಟರ್ ಪದ್ಧತಿಯನ್ನು ಅನುಸರಿಸಲೇ ಬೇಕಾಗುತ್ತದೆ. ರೋಸ್ಟರ್ ಪದ್ಧತಿಯನ್ನು ಅನುಸರಿಸುತ್ತೀರಾ ಹೇಗೆ ? ಈಗಾಗಲೇ ಅವರು ರೆಕ್ರೂಟ್‌ಮೆಂಟ್‌ಗೆ ಅರ್ಜಿಯನ್ನು ಏನು ಹಾಕುತ್ತಾರೆ ಅವರಲ್ಲಿ ಕೆಲವರು ಎಂಪ್ಲಾಯಮೆಂಟ್ ಎಕ್ಸ್‌ಚೇಂಜ್‌ನಲ್ಲಿ ತಮ್ಮ ಹೆಸರನ್ನು ರಿಜಿಸ್ಟರ್ ಮಾಡಿಸಿರುವುದಿಲ್ಲ. ನೀವು ರೆಕ್ರೂಟ್‌ಮೆಂಟ್‌ಗೆ ಅರ್ಜಿ ಹಾಕಿದವರನ್ನು ಬಿಟ್ಟು ಎಂಪ್ಲಾಯಿಮೆಂಟ್ ಎಕ್ಸ್‌ಚೇಂಜ್‌ನಿಂದ ನೇರವಾಗಿ ಹೆಸರುಗಳನ್ನು ತೆಗೆದುಕೊಂಡು ಡೈರೆಕ್ಟ್ ಅಪಾಯಿಂಟ್ ಮಾಡಿಕೊಂಡರೆ ಡೈರೆಕ್ಟ್ ಅಪ್ಲಿಕೇಷನ್ ಕೊಟ್ಟವರಿಗೆ ಸ್ವಲ್ಪ ಅನ್ಯಾಯವಾಗುತ್ತದೆ. ಅವರು ಕಮಿಟಿ ಮುಂದೆ ಇದ್ದವರನ್ನು ಮಾತ್ರ ತೆಗೆದುಕೊಳ್ಳುತ್ತಾರೆಂದು ಭಾವಿಸುತ್ತಾರೆ. ಇದನ್ನು ಹೇಗೆ ಸರಿಪಡಿಸುತ್ತೀರಿ.

ಶ್ರೀ ರಾಮಕೃಷ್ಣ ಹೆಗಡೆ.—ಯಾರು ರೆಕ್ರೂಟ್‌ಮೆಂಟ್ ಕಮಿಟಿ ಮುಂದೆ ಹಾಜರಾಗಿರುತ್ತಾರೋ ಅವರ ಮಾರ್ಕ್ಸ್ ಎಲ್ಲವನ್ನೂ ನೋಡಿ ರೋಸ್ಟರ್ ಪದ್ಧತಿ ಪ್ರಕಾರ ನೇಮಕಾತಿಯಾಗುತ್ತದೆ. ಯಾವ್ಯಾವ ವರ್ಗಕ್ಕೆ ಎಷ್ಟು ರಿಸರ್ವೇಷನ್ ಇರಬೇಕೋ ಅದನ್ನು ಗಣನೆಯಲ್ಲಿಟ್ಟುಕೊಂಡು ನೇಮಕಾತಿ ಮಾಡುತ್ತೇವೆ.

ಅಧ್ಯಕ್ಷರು.—ಮಾನ್ಯ ಡಿಸೋಜಾರವರ ಪ್ರಶ್ನೆಯನ್ನು ಲೋಕೋಪಯೋಗಿ ಇಲಾಖೆಗೆ ವರ್ಗಾಯಿಸಲಾಗಿದೆ, ಆ ಇಲಾಖೆಯ ಪ್ರಶ್ನೆಗಳು ಬರುವ ದಿನ ತೆಗೆದುಕೊಳ್ಳೋಣ.

ಗೋಧಿ ಹಿಟ್ಟಿನ ಗಿರಣಿಯವರು ಸರಕಾರದಿಂದ ಹಣಕಾಸಿನ ನೆರವು ಕೋರಿರುವುದು

೨೧೬೬. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗೋಧಿ ಹಿಟ್ಟಿನ ಗಿರಣಿಯವರು ಸರಕಾರದಿಂದ ಹಣಕಾಸಿನ ನೆರವನ್ನು ಕೋರಿರುವುದು ನಿಜವೆ ?

ಆ) ಹಾಗಿದ್ದಲ್ಲಿ, ಸರಕಾರ ಅವರ ಕೋರಿಕೆಯನ್ನು ಪರಿಗಣಿಸುವುದೇ ?

ಇ) ಹಾಗಿದ್ದಲ್ಲಿ, ಸರಕಾರದ ಹಣಕಾಸಿನ ಮೇಲೆ ಪರಿಣಾಮವೇನು ?

ಶ್ರೀ ಬಸವರಾಜ ಪಾಟೀಲ್ ತಮ್ಮನ ಗೌಡ ಆನ್ವರಿ (ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಇ) ಇಲ್ಲ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ತಡವಾಗಿ ಅರ್ಥವಾಗಿದೆಯೆಂದು ಅನಿಸುತ್ತದೆ. ಗೋಧಿ ಹಿಟ್ಟಿನ ಗಿರಣಿಯವರು ಗೋಧಿ ಹೆಚ್ಚಿಗೆ ಏನು ದಾಸ್ತಾನಾಗಿದೆ. ಅದನ್ನು ಅವರು ಕೊಂಡಾಗ ಸರಕಾರದಿಂದ ರಿಯಾಯಿತಿ ಕೇಳಿದ್ದಾರೆ ಅವರಿಗೆ ಕನ್‌ಸೆಷನ್ ರೇಟಿನಲ್ಲಿ ಏನಾದರೂ ಕೊಡುವುದಕ್ಕೆ ಸಾಧ್ಯ

ವಿದೆಯೇ? ಉತ್ತರದಲ್ಲಿ ಇಲ್ಲವೆಂದು ಹೇಳಿದ್ದಾರೆ. ಅವರಿಗೆ ಏನಾದರೂ ಪರಿಹಾರವನ್ನು ಒದಗಿಸಿ ಕೊಡುತ್ತೀರಾ?

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ಹಿಂದೆ ನಾವು ರಾಜ್ಯ ಸರ್ಕಾರ ಗೋಧಿ ಮಿಲ್ ಮಾಲೀಕರಿಗೆ ಗೋಧಿಯನ್ನು ಕೊಡುವ ಮತ್ತು ಸೋಜಿ ಹಿಟ್ಟನ್ನು ಪಡೆಯುವ ವ್ಯವಹಾರದಲ್ಲಿ ಅವರಿಗೆ ಮತ್ತು ಸರಕಾರದ ಜೊತೆಯಲ್ಲಿ ಹಣಕಾಸಿನ ವ್ಯವಹಾರ ಇದೆ. ತಾವು ಕೇಳಿರತಕ್ಕಂತಹ ಪ್ರಶ್ನೆ ಇದರಲ್ಲಿ ಬರುವುದಿಲ್ಲ, ಸಹಾಯವೆಂದು ಕೇಳಿದ್ದೀರಿ. ಅವರ ವಿವರಣೆ ನನ್ನ ಹತ್ತಿರ ಇಲ್ಲ ಪ್ರತ್ಯೇಕವಾಗಿ ಪ್ರಶ್ನೆ ಕೇಳಿದರೆ ಉತ್ತರ ನೀಡುತ್ತೇನೆ.

ಅಧ್ಯಕ್ಷರು.—ಶ್ರೀ ಬಿ. ಲಕ್ಕಪ್ಪ, ಶ್ರೀ ಎಂ. ಎಸ್. ಪಾಟೀಲ್, ಶ್ರೀ ಡಿ. ಎ. ಟಿನ್ನಪ್ಪ ಶ್ರೀಮತಿ ಸುಮಾ ವಸಂತ ಇವರ ಪ್ರಶ್ನೆಗಳಿಗೆ ಸಮಯ ಕೇಳಿದ್ದಾರೆ. ಸಮಯವನ್ನು ಕೊಟ್ಟಿದ್ದೇನೆ. ಉತ್ತರವನ್ನು ಕೊಡಿಸುತ್ತೇನೆ.

ಶ್ರೀ ಬಿ. ಲಕ್ಕಪ್ಪ.—೨೦ಕ್ಕೆ ಸದನ ಮುಂಗಿಯುತ್ತದೆ.

ಶ್ರೀ ವೀರಣ್ಣ.—ಅವರು ತಾಲ್ಲೂಕ್‌ವೈಸ್, ಡಿಸ್ಟ್ರಿಕ್ಟ್‌ವೈಸ್ ಮಾಹಿತಿ ಕೇಳಿದ್ದಾರೆ. ಅದಕ್ಕೆ ಸಮಯ ಬೇಕು ಎಂದು ಕೇಳಿದ್ದೇವೆ.

ಅಧ್ಯಕ್ಷರು.—ಅಧಿವೇಶನ ಮುಗಿದರೂ ಕೂಡ ಉತ್ತರ ಬಂದ ಮೇಲೆ ಊರಿಗೆ ಕಳಿಸಿಕೊಡುತ್ತೇನೆ

ಶ್ರೀ ಬಿ. ಲಕ್ಕಪ್ಪ.—ಈ ಸದನದಲ್ಲಿ ಚರ್ಚೆ ಮಾಡಬೇಕೆಂದೂ, ಇಡೀ ರಾಜ್ಯದ ಜನತೆಗೆ ಗೊತ್ತಾಗ ಬೇಕೆಂದು ನಾವು ಪ್ರಶ್ನೆ ಹಾಕಿದ್ದು.

ಅಧ್ಯಕ್ಷರು.—ಅಧಿವೇಶನ ಮುಂಗಿದರೂ ಆ ಮೇಲೆ ಉತ್ತರ ಕಳಿಸಿಕೊಡುತ್ತೇನೆ.

ಶ್ರೀ ಬಿ. ಲಕ್ಕಪ್ಪ.—ಅಧಿವೇಶನ ಮುಂಗಿಯುವುದರೊಳಗೆ ಉತ್ತರ ಕೊಡಿಸಿ.

ಅಧ್ಯಕ್ಷರು.—ಸಾಧ್ಯವಾದಷ್ಟು ಪ್ರಯತ್ನ ಮಾಡುತ್ತೇನೆ.

ಶ್ರೀ ಕುವೆಂಪು ಕಾಲೇಜಿನ ಆವರಣದಲ್ಲಿ ಆದ ಘರ್ಷಣೆ ಬಗ್ಗೆ

೨೭೦೯. ಶ್ರೀ ಪಟಪಂಕ್ಕಿ ರತ್ನಾಕರ (ತೀರ್ಥಹಳ್ಳಿ), ಶ್ರೀ ಕೆ. ಎ. ರವೀಂದ್ರನಾಥಬಾಬು, (ಕೊಟ್ಟೂರು).—ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಿನಾಂಕ ೧೮-೯-೮೭ರಂದು ಶ್ರೀ ಕುವೆಂಪು ಕಾಲೇಜಿನ ಆವರಣದಲ್ಲಿ ಆದ ಘರ್ಷಣೆ ಬಗ್ಗೆ ಚನ್ನಪಟ್ಟಣದ ಗ್ರಾಮಾಂತರ ಪೊಲೀಸ್ ಠಾಣೆಗೆ ಬಂದ ಫಿರ್ಯಾದಿಗಳೆಷ್ಟು?

ಆ) ಸದರಿ ಫಿರ್ಯಾದಿಗಳು ನೋಂದಣಿಯಾದ ದಿನಾಂಕ ಯಾವುದು?

ಇ) ಈ ಬಗ್ಗೆ ಕೈಗೊಂಡ ಕ್ರಮವೇನು?

ಈ) ಮೊದಲನೆಯ ತಪಾಸಣಾ ವರದಿಯನ್ನು (ಎಫ್.ಐ.ಆರ್.) ನ್ಯಾಯಾಲಯಕ್ಕೆ ಸಲ್ಲಿಸಿದ ದಿನಾಂಕ ಯಾವುದು?

ಉ) ಈ ಮಧ್ಯ ಭಾಗದ ಅವಧಿಯಲ್ಲಿ ಕಾಲೇಜಿನ ಸಮಾರಂಭದಲ್ಲಿ ಅಂದಿನ ಗೃಹ ಸಚಿವರು ಭಾಗವಹಿಸಿದ್ದು ನಿಜವೇ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು),—

ಅ) ಎರಡು ಫಿರ್ಯಾದಿಗಳು
ಒಂದು ಕಾಗ್ನಿಜಬಲ್
ಒಂದು ನಾನ್‌ಕಾಗ್ನಿಜಬಲ್

ಆ) ದಿನಾಂಕ ೧೮-೯-೧೯೮೭